ದೀವಟಿಗೆ

ವಾರಪತ್ರಿಕೆ, ಸಂಪಾದಕ: ಸರಿಮನೆ ನಾಗರಾಜ್.

ಸಂಕ್ರಾಂತಿಯ ಶುಭಾಶಯ

'ದೀವಟಿಗೆ'ಯ ಎಲ್ಲ ಓದುಗರು, ಜಾಹೀರಾತುದಾ ಹಾಗೂ ಅಭಿಮಾನಿಗಳಿಗೆ ಸಂತೋಷ,ಸಂಭ್ರಮಗಳ ಎಳ್ಳು ಬೀರುವ ಹಬ್ಬವಾದ ಸಂಕ್ರಾಂತಿಯ ಶುಭಾಶಯಗಳು.



ಸಂಪುಟ ೧ | ಪ್ರಾಯೋಗಿಕ ಸಂಚಿಕೆ | ೧೦-೧-೮೨ ಭಾನುವಾರ | ಖಾಸಗಿ ಪ್ರಸಾರಕ್ಕಾಗಿ | ಸಂಚಿಕೆ ೦

ಸಂಪಾದಕೀಯ

ಓದುಗ ಬಂಧುಗಳೆ,

ನೀವೆಲ್ಲ ಬಹಳ ಸಮಯದಿಂದ ಕಾಯುತ್ತಿದ್ದ "ದೀವಟಿಗೆ"ಯನ್ನು ಇದೋ, ನಿಮ್ಮ ಕೈಲಿಡುತ್ತಿದ್ದೇವೆ. ಬರಮಾಡಿಕೊಳ್ಳಿ.

ನಿಮ್ಮೆಲ್ಲರ ಸಹಕಾರ, ಪ್ರೋತ್ಸಾಹಗಳನ್ನೇ ನಂಬಿಕೊಂಡು ಈ ರಂಗಕ್ಕೆ ಇಳಿಯುತ್ತಿದ್ದೇವೆ. ಒಳ್ಳೆಯ ಕೆಲಸ ಮಾಡಬೇಕೆಂದಿದ್ದೇವೆ. ಬೆಂಬಲಿಸಿ.

ತಪ್ಪುಗಳಾಗಬಹುದು. ಅಭಿಪ್ರಾಯ ಭೇದಗಳಿರಬಹುದು. ನಮ್ಮ ಕೆಲಸ ನಿಮ್ಮ ನಿರೀಕ್ಷೆಯ ಮಟ್ಟ ಮುಟ್ಟದಿರಬಹುದು. ಹಾಗಾದಾಗ ಕಡ್ಡಿ ತುಂಡು ಮಾಡಿದಂತೆ ಮಾಡಬೇಡಿ. ನಿಮ್ಮ ಅಭಿಪ್ರಾಯ ತಿಳಿಸಿ. ಸಲಹೆಗಳನ್ನು ಕೊಡಿ. ತಪ್ಪು ಎನಿಸಿದ್ದನ್ನು ತಿಳಿಸಿ ಹೇಳಿ. ಆದಷ್ಟು ತಿದ್ದಿಕೊಳ್ಳುತ್ತೇವೆ. ಈಗಷ್ಟೇ ಕಣ್ಣು ಬಿಡುತ್ತಿದ್ದೇವೆ. ನಮ್ಮನ್ನು ಸುಧಾರಿಸಿ.

ಪತ್ರಿಕೆ ಏನು ಮಾಡಬಹುದೆಂಬ ಬಗ್ಗೆ ಉದ್ದುದ್ದ ಹೇಳುತ್ತಾರೆ. ಪತ್ರಿಕೆಯ ಧ್ಯೇಯ ಧೋರಣೆಗಳ ಬಗ್ಗೆ ಪುಟಗಟ್ಟಲೆ ಬರೆಯುತ್ತಾರೆ. ಆದರೆ ನಮ್ಮ ಕೈಯಳತೆ ಚಿಕ್ಕದು. ನಮ್ಮ ಸಾಮರ್ಥ್ಯ ಎಷ್ಟು ಕನಿಷ್ಠ ಎಂಬುದು ನಮಗೆ ಸುಮಾರಾಗಿ ಗೊತ್ತಿದೆ. ನಮಗೆ, ನಾವು ದೊಡ್ಡದೇನೋ ಕಡಿದು ಗುಡ್ಡೆ ಹಾಕುತ್ತೇವೆನ್ನುವ ಹೆಗ್ಗಳಿಕೆಯಿಲ್ಲ. ನಮ್ಮ ಶಕ್ತಿಯಿದ್ದಷ್ಟು ಮಾತ್ರ ಒಳ್ಳೆಯ ಕೆಲಸ ಮಾಡುತ್ತೇವೆಂದು ಭರವಸೆ ಕೊಡುತ್ತೇವೆ.

ಯಾರನ್ನೋ ಬೈದು ಬರೆದರೆ 'ಬೋಲ್ಡ್' ಆಗಿ ಬರೆಯುತ್ತಾನೆ ಎನ್ನುತ್ತೀರಿ. ರಂಗುರಂಗಾಗಿ ಸುದ್ದಿ ಪ್ರಕಟಿಸಿದರೆ 'ಭೇಷ್' ಎನ್ನುತ್ತೀರಿ. ಅನ್ಯಾಯವನ್ನು ವಿರೋಧಿಸಬೇಕು, ಮೋಸದ ವರದಿ ಕಣ್ಣಿಗೆ ಕಟ್ಟುವಂತಿರಬೇಕು, ಹೌದು. ಆದರೆ ಬರೀ ಯಾರನ್ನೋ ಬೈದು ಧೈರ್ಯಸ್ಥ ಎನ್ನಿಸಿಕೊಳ್ಳುವುದು, ಬಣ್ಣ ಬಣ್ಣವಾಗಿ ಬರೆದು ಮೆಚ್ಚುಗೆ ಪಡೆಯುವುದು—ಇದಿಷ್ಟೇ ನಮ್ಮ ಗುರಿಯಲ್ಲ. ಪತ್ರಿಕೆ ಅದಕ್ಕಿಂತ ಒಳ್ಳೆಯದು ಏನು ಮಾಡಬಹುದು, ಓದುಗರಿಗೆ ಹೇಗೆ ಉಪಯುಕ್ತವಾಗಬಹುದು— ಎಂಬುದರ ಕಡೆ ಸದಾ ಗಮನ ಇಡಬೇಕೆಂದಿದ್ದೇವೆ.

ಜನರಿಗೆ ಅನೇಕ ಸಮಸ್ಯೆಗಳಿವೆ. ಹೊಸ ಹೊಸ ತೊಂದರೆಗಳು ಹುಟ್ಟುತ್ತಲೇ ಇವೆ. ಆದರೆ ನಮ್ಮ ಸಮಸ್ಯೆಗಳನ್ನು ಬಗೆಹರಿಸಲು ಬೇರೆ ಯಾರೋ ಬರುವುದಿಲ್ಲ. ನಾವೇ ಪ್ರಯತ್ನ ಹಾಕಬೇಕು. ಆದರೆ ಒಬ್ಬೊಬ್ಬರ ಪ್ರಯತ್ನಗಳಿಂದ ಕಷ್ಟಗಳು ತೀರುವ ಕಾಲ ಇದಲ್ಲ. ಅವುಗಳ ನಿವಾರಣೆಗೆ ಜನರಲ್ಲಿ ಒಗ್ಗಟ್ಟು ಬೇಕು, ಸಹಕಾರ ಬೇಕು, ಪರಸ್ಪರ ಸಹನೆ ಬೇಕು. ಈಗಾಗಲೇ ಹಲವಾರು ಕಡೆ ಜನ ಈ ರೀತಿ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುತ್ತಿದ್ದಾರೆ; ಅಂಥ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಇಂಥ ಅನುಭವಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ತಲುಪಿಸುವುದು ನಮ್ಮ ಗುರಿ. ಅದರಿಂದ ಸ್ಫೂರ್ತಿ, ಉತ್ತೇಜನ ಪಡೆಯುವುದು ನಿಮಗೆ ಬಿಟ್ಟದ್ದು.

ನಮ್ಮ ಹಳ್ಳಿಗಾಡಿನ ಮಕ್ಕಳ ವಿದ್ಯಾಭ್ಯಾಸ ಹೇಗೆ ಸಾಗಿದೆ? ಶಾಲೆಗೆ ಸೇರಿದರೆ ಸಾಕು: ಒಂದುರೀತಿ ತಂತಾನೆ ಹೈಸ್ಕೂಲ್ ವರೆಗೆ ಜಾರುತ್ತಾರೆ. ಹೈಸ್ಕೂಲು ಮುಗಿದೊಡನೆ ಕಾಲೇಜು. ಅಲ್ಲಿ ಒಂದು ಡಿಗ್ರಿ ಆದೊಡನೆ ಇನ್ನೊಂದು, ಅದು ಮುಗಿದರೆ ಮತ್ತೊಂದು—ತಂದೆ ತಾಯಿಗೆ ಓದಿಸುವ ಶಕ್ತಿ ಇದ್ದರೆ. ಯಾವ ಡಿಗ್ರಿ? ಅದು ಮುಖ್ಯವಲ್ಲ. ಯಾವುದೋ ಒಂದು. ಒಟ್ಟಲ್ಲಿ ಓದಬೇಕು, ಡಿಗ್ರಿ ಆಗಬೇಕು, 'ಕೆಲಸ' ಸಿಗಬೇಕು. ಅವರಿಗೆ ಯಾವ ವಿಷಯದಲ್ಲಿ ಆಸಕ್ತಿ, ಪ್ರತಿಭೆ ಇದೆ; ಅಥವಾ ಯಾವ ಥರದ ಉದ್ಯೋಗ ಅವರಿಗೆ ಹೊಂದುತ್ತೆ—ಈ ಎಲ್ಲ ವಿವೇಚನೆಗೆ ಪುರುಸೊತ್ತಿಲ್ಲ. ಪೋಗಲಿ, ಪಾಲಿಟೆಕ್ನಿಕ್, ಐ.ಟಿ.ಐ. ನಂಥ ತಾಂತ್ರಿಕ ಶಿಕ್ಷಣ, ನರ್ಸಿಂಗ್, ರೇಡಿಯೋ ಪರಿಣತಿ, ಮುದ್ರಣ ಇತ್ಯಾದಿ ಉದ್ಯೋಗಕ್ಕೆ ನೇರ ಸಂಬಂಧ ಇರುವ ವಿದ್ಯಾಭ್ಯಾಸ ಇವುಗಳ ಬಗ್ಗೆ ಕೂಡ ಪೋಷಕರಿಗಾಗಲೀ, ವಿದ್ಯಾರ್ಥಿಗಳಿಗಾಗಲೀ ಸರಿಯಾದ ಮಾಹಿತಿ ಇಲ್ಲ ಈ ಬಗ್ಗೆಯೂ ಅಳಿಲಸೇವೆ ಮಾಡುವುದು ನಮ್ಮ ಆಸೆ.

ಸರ್ಕಾರ ಎಷ್ಟೋ ಯೋಜನೆಗಳನ್ನು ಜಾರಿಗೆ ತರುತ್ತಿದೆ—ತೀವ್ರ ಅಭಿವೃದ್ಧಿ ಯೋಜನೆ, ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆ, ಕಾಫಿ, ಏಲಕ್ಕಿ, ತೆಂಗು ಬೆಳೆ ಯೋಜನೆ, ಅಂಗವಿಕಲರಿಗೆ ಸಹಾಯ ಇತ್ಯಾದಿ. ಆದರೆ ಈ ಬಗ್ಗೆ ವಿವರವಾದ ಮಾಹಿತಿ ಜನರಿಗೆ ಸರಿಯಾಗಿ ತಲುಪುತ್ತಿಲ್ಲ. ತಮ್ಮ ಪ್ರದೇಶದಲ್ಲೇ ನಡೆಯುವ ರಸ್ತೆ, ಮೋರಿ, ಸೇತುವೆ, ಕೆರೆ ಮುಂತಾದ ಕಾಮಗಾರಿಗಳ ಬಗ್ಗೆಯೂ ಜನರಿಗೆ ವಿವರಗಳು ತಿಳಿದಿರುವುದಿಲ್ಲ. ಇದರಿಂದ ಎಷ್ಟೋ ಸಲ ಯೋಜನೆಗಳು ವ್ಯರ್ಥವಾಗುತ್ತವೆ; ಅವುಗಳಿಗೆ ಸುರಿದಹಣ ಯಾವ್ಯಾವುದೋ ಮೋರಿ ಚರಂಡಿಗಳಲ್ಲಿ ಹರಿದು ಹೋಗುತ್ತದೆ. ಈ ಬಗ್ಗೆ ಕೂಡ ಜನರಿಗೆ ಆದಷ್ಟು ಮಾಹಿತಿ ಕೊಡುವುದು ನಮ್ಮ ಇನ್ನೊಂದು ಉದ್ದೇಶ.

ಹೀಗೆ ಆಸೆಗಳು, ಗುರಿಗಳು ಹತ್ತು—ಹಲವು. ಆದರೆ ಇವುಗಳನ್ನು ಈಡೇರಿಸುವಲ್ಲಿ ನಮಗಿರುವ ಅಡ್ಡಿ—ಆತಂಕಗಳು ಬಹಳ. ಜೊತೆಗೆ ಮೊದಲೇ ಹೇಳಿದಂತೆ ನಮ್ಮ ಶಕ್ತಿಯೂ ಅಲ್ಪವೇ. ಆದರೂ ನಿಮ್ಮೆಲ್ಲರ ಸಲಹೆ, ಸಹಕಾರಗಳಿದ್ದರೆ ನಮ್ಮ ಕೆಲಸ ಅಷ್ಟು ಹಗುರ ಆದೀತು.

ಇನ್ನು, ಪತ್ರಿಕೆ ಪ್ರಾರಂಭಿಸುವ ಬಗ್ಗೆ ಬಹಳ ಜನ ಹಿರಿಯರು, ಗೆಳೆಯರು ಮೆಚ್ಚಿ ಬೆನ್ನು ತಟ್ಟಿದ್ದಾರೆ. ಅದರಲ್ಲಿರುವ ಕಷ್ಟ—ನಷ್ಟಗಳ ಬಗ್ಗೆ ವಿವರವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅಷ್ಟಿಷ್ಟು ಹಣಕಾಸಿನ ಬೆಂಬಲವನ್ನೂ ಕೊಟ್ಟಿದ್ದಾರೆ. "ಅನ್ಯಾಯವಾಗಿ ಹಣ ಕಳೆದು ಕೊಳ್ಳಬೇಡ" ಎಂದವರೂ ಇದ್ದಾರೆ. "ಅಮೂಲ್ಯವಾದ ಮುದ್ರಣಕಾಗದವನ್ನು ಇದಕ್ಕಾಗಿ ದಂಡ ಮಾಡುತ್ತೀರಿ, ಅಷ್ಟೇ ಹೊರತು ಪತ್ರಿಕೆಯಿಂದ ನೀವು ಜನರನ್ನು ತಿದ್ದುವುದಾಗಲೀ ಸಂಘಟನೆ ಮಾಡುವುದಾಗಲೀ ಸಾಧ್ಯವೆ? ಹೊಳೆ ನೀರಲ್ಲಿ ಹುಳಿ ಹಿಂಡಿದ ಹಾಗೆ" ಎಂದೂ ಒಬ್ಬರು ಹಿರಿಯರು ಹೇಳಿದರು. ಆದರೂ ಹೆಚ್ಚಿನವರು ತುಂಬು ಹೃದಯದಿಂದ ಪ್ರೋತ್ಸಾಹದ ಮಾತನ್ನಾಡಿದ್ದಾರೆ.

ಕಡೆಯದಾಗಿ ಒಂದು ಮಾತು ಹೇಳಲೇಬೇಕು. ಇಲ್ಲಿನ ಜನ ಪತ್ರಿಕೆಯ ಹೆಸರಲ್ಲಿ ಈಗಾಗಲೇ ಕಹಿ ಅನುಭವಗಳನ್ನು ಕಂಡಿದ್ದಾರೆ. ಅದರ ಹಿನ್ನೆಲೆಯಲ್ಲಿ ನಾವು ಈ ಪತ್ರಿಕೆಯ ಕೆಲಸಕ್ಕೆ ಕೈ ಹಾಕಿದ್ದೇವೆ. **ಮರ್ಯಾದೆಗೆ ಅಂಜುವವರಿಗೆ** ಈ ಪರಿಸ್ಥಿತಿ ಎಷ್ಟು ಕಷ್ಟದ್ದು ಎಂದು ನೀವೇ ಊಹಿಸಬಹುದು.

ಹೆಚ್ಚು ಹೇಳುವುದಿಲ್ಲ. ಪತ್ರಿಕೆ ನಿಮ್ಮ ಕೈಲಿದೆ. ಅದನ್ನು ಉಳಿಸಿ ಬೆಳೆಸುವ ಹೊಣೆ ನಿಮಗೇ ಬಿಟ್ಟಿದ್ದೇವೆ.

ಮಿಲಾದುನ್ನಬಿ ದಿನಾಚರಣೆ

ಕೊಪ್ಪ: ಮೊಹಮ್ಮದ್ ಪೈಗಂಬರರವರ ಜನ್ಮ ದಿನಾಚರಣೆಯಾದ ಮಿಲಾದುನ್ನಬಿಯನ್ನು ಇದೇ ೮ರಂದು ಇಲ್ಲಿನ ಜಾಮಿಯ ಮಸೀದಿಯಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು. ಬೆಳಿಗ್ಗೆ ಊರಿನ ಮುಖ್ಯಬೀದಿಗಳಲ್ಲಿ ಮೆರವಣಿಗೆ ನಡೆಯಿತು. ನಂತರ ಮಸೀದಿಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಶೇಖ್‌ಮಾಮ್ ಅಹಮದ್ ಮುಸ್ಲಿಯಾರ್, ಎಂ.ಎಫ್.ಡಿ. ರವರಿಂದ ಉಪನ್ಯಾಸ, ನಂತರ ಮಕ್ಕಳ ಕಾರ್ಯಕ್ರಮ ನಡೆದವು. ನಂತರ ಭೋಜನಕೂಟ ನಡೆಯಿತು.

ಶಬರಿಮಲೆ ಯಾತ್ರೆ

ಕೊಪ್ಪ: ದಿ. ೮ ರಂದು ಸಡಗರ ಸಂಭ್ರಮದೊಡನೆ ಸುಮಾರು ೩೫ ಜನ ಶಬರಿಮಲೆ ಯಾತ್ರಿಕರು ಇಲ್ಲಿಂದ ಶಬರಿಮಲೆಗೆ ಯಾತ್ರೆ ಹೊರಟರು. ಭಕ್ತಾದಿಗಳು ಗುತ್ತಿಯಮ್ಮ ದೇವಸ್ಥಾನದವರೆಗೆ ಹೋಗಿ ಅವರನ್ನು ಬೀಳ್ಕೊಟ್ಟರು.

'ಅಂಕುರ'ದ ಕಾರ್ಯಕ್ರಮ

ಕೊಪ್ಪ: ದಿ. ೧೭ ರಂದು ಭಾನುವಾರ ಸಂಜೆ ೪ ಗಂಟೆಗೆ ಕೊಪ್ಪ ಪುರಭವನದ ಆವರಣದಲ್ಲಿ ಅಂಕುರ ಬಳಗದ ಆಶ್ರಯದಲ್ಲಿ ಶಿವಮೊಗ್ಗ ವೇಣುಗಾನ ವೃಂದದ ಶ್ರೀ ವೇಣುಗೋಪಾಲ್‌ರವರಿಂದ ಲಘು ಸಂಗೀತದ ಕಾರ್ಯಕ್ರಮವಿದೆ.

ವಿಚಾರ

ನಮ್ಮ ಶಿಕ್ಷಣ

ನಮ್ಮ ದೇಶದಲ್ಲಿ ವಿದ್ಯಾಭ್ಯಾಸ ಪದ್ಧತಿ ತೀರ ಕುಲಗೆಟ್ಟಿದೆ ಎಂದು ಬಹು ಮಂದಿ ಎಲ್ಲರೂ ಒಪ್ಪುತ್ತಾರೆ. ಹಾಗಾದರೆ ಅದರಲ್ಲಿ ಸುಧಾರಣೆಗಳಾಗಬೇಕೆ ಅಥವಾ ಬುಡಸಹಿತ ಬದಲಾಗಬೇಕೆ – ಮುಂತಾದ ಪ್ರಶ್ನೆಗಳು ಏಳುತ್ತವೆ.

ಇಲ್ಲಿ ನಮ್ಮ ವಿದ್ಯಾಭ್ಯಾಸದ ಪದ್ಧತಿಯಲ್ಲಿನ ದೋಷಗಳ ಎರಡು ಮುಖಗಳ ಪರಿಚಯ ಇದೆ. ಇನ್ನೂ ಹಲವಾರು ಅಂಶಗಳ ಬಗ್ಗೆ ಚಿಂತನೆಗಳನ್ನು ಕ್ರಮೇಣ ಪ್ರಕಟಿಸುವ ಉದ್ದೇಶ ಇದೆ. ಓದುಗರಿಂದ ಅಂಥ ವಿಚಾರಪೂರ್ಣ ಲೇಖನಗಳನ್ನು ಆಹ್ವಾನಿಸುತ್ತೇವೆ.

–ಸಂ.

ಶಿಕ್ಷಣ: ವ್ಯಾವಹಾರಿಕ ದೃಷ್ಟಿ

ನಮ್ಮ ಶಿಕ್ಷಣ ಪದ್ಧತಿಯನ್ನು ಸುಧಾರಿಸುವುದರ ಕುರಿತು ನಾನಾ ಅಭಿಪ್ರಾಯಗಳಿವೆ. ಅದು ಈಗಿರುವ ವ್ಯವಸ್ಥೆಯನ್ನೇ ಅಳಿಸಿಹಾಕುವುದರಿಂದ ಹಿಡಿದು ವರ್ಷ ವರ್ಷ ಪ್ರಶ್ನೆ ಪತ್ರಿಕೆಗಳನ್ನು ಬದಲಾಯಿಸುತ್ತ ಮತ್ತು ಅದರ ವಿರುದ್ಧ ಚಳವಳಿ ಮಾಡಿಸಿಕೊಳ್ಳುತ್ತ ಪ್ರಯೋಗ ನಡೆಸುವುದರ ತನಕದ ಹಂತಗಳಿವೆ.

ಈ ಶಿಕ್ಷಣದ ಸ್ವರೂಪವನ್ನೇ ಬದಲಾಯಿಸಿ ಅದನ್ನು ಉದ್ಯೋಗದೊಂದಿಗೆ ಜೋಡಿಸುವ ಯೋಜನೆಯೇನೋ ಪರಮ ಆದರ್ಶವಾದ ಕಲ್ಪನೆ. ಅದನ್ನು ನಾನು ಒಪ್ಪುತ್ತೇನೆ ಕೂಡ. ಆದರೆ ವಾಸ್ತವಿಕತೆಯ ದೃಷ್ಟಿಯಿಂದ ಇದು ಸದ್ಯಕ್ಕಂತೂ ಅಸಾಧ್ಯವೆನಿಸುವ ವಿಚಾರ. ಪ್ರಸ್ತುತ ಸರ್ಕಾರಿ, ಮ್ಯಾನೇಜ್‌ಮೆಂಟ್, ಯೂನಿವರ್ಸಿಟಿ ಇತ್ಯಾದಿ ಹಿತಾಸಕ್ತಿಗಳು ಹಾಗೂ ವಿದ್ಯಾರ್ಥಿ ಚಳವಳಿಗಳು ಶಿಕ್ಷಣ ಕ್ಷೇತ್ರದಲ್ಲಿ ಯಾ[illegible] ಯಾವುದೇ [illegible] ಕೊಳ್ಳದೆ ಮೊದಲ ಹಂತವಾಗಿ ಸರಳವಾದ ಸುಧಾರಣೆಯನ್ನು ಅಳವಡಿಸಬೇಕಾದುದು ವ್ಯಾವಹಾರಿಕ ದೃಷ್ಟಿಯಿಂದ ಸರಿಯಾದ ಪರಿಹಾರ ಮಾರ್ಗವೆನಿಸುತ್ತದೆ.

ಮೊದಲ ಹಂತದ ಈ ಸರಳವಾದ ಸುಧಾರಣೆ ಹೇಗಿರಬೇಕು ಎಂಬುದು ಬಹು ಮುಖ್ಯಪ್ರಶ್ನೆ. ಮೊಟ್ಟಮೊದಲಿಗೆ ಕಡ್ಡಾಯ ಹಾಜರಾತಿಯನ್ನು ತೆಗೆದು ಹಾಕಬೇಕು. ಇದಕ್ಕೆ ಹಿಂಸಾತ್ಮಕವಾದ ಮತ್ತು ಒತ್ತಡ ತರುವ ಯಾವ ವಿರೋಧವೂ ಬರಲಾರದು ಇದರಿಂದಾಗಿ ಪಾಠದಲ್ಲಿ ಆಸಕ್ತಿ ಇರದ ಮಕ್ಕಳು ತಂತಾನೇ ದೂರಸರಿಯುತ್ತಾರೆ; ಹಾಗೂ ಅಶಿಸ್ತು ಕಡಿಮೆಯಾಗುತ್ತದೆ. ಇದಾದನಂತರ ಆಸಕ್ತ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ನಡುವೆ ಹಾರ್ದಿಕ ಸಂಬಂಧ ಬೆಳೆಯುತ್ತದೆ. ಈ ಆತ್ಮೀಯತೆಯ ಆವರಣದೊಳಗೆ ಹೊಸ ಪಠ್ಯಕ್ರಮವನ್ನು ರೂಪಿಸಿಕೊಳ್ಳಬೇಕು. ಈ ಹೊಸ ಪಠ್ಯಕ್ರಮ ಕ್ಲಾಸಿನ ಥಿಯರಿ ಬೋಧನೆಯನ್ನು ಕನಿಷ್ಠಮಟ್ಟಕ್ಕಿಳಿಸಿ (ಬೇಡವೆಂದು ನಾನು ಹೇಳುತ್ತಿಲ್ಲ.) ವಿದ್ಯಾರ್ಥಿಗಳೂ ಅಧ್ಯಾಪಕರೂ ಕ್ಲಾಸ್‌ರೂಮಿನಿಂದ ಹೊರ ಪ್ರಪಂಚಕ್ಕೆ ಒಟ್ಟಾಗಿ ಕಾಲಿಡಬೇಕು. ಆ ಮೂಲಕ ಮಕ್ಕಳು ವಿಷಯಗಳನ್ನು ಹೊರ ಪ್ರಪಂಚದಿಂದ ಅನುಭವಪೂರ್ವಕ ಕಲಿಯಬೇಕು. ಹೀಗೆ ಸ್ವತಂತ್ರವಾದ ಒಂದು ಆವರಣದೊಳಗೆ ವಿದ್ಯಾಭ್ಯಾಸಪದ್ಧತಿ ಬೆಳೆದು ಬರದೆ ಬೇರೆ ವ್ಯಾವಹಾರಿಕ ಮಾರ್ಗವೇ ಇಲ್ಲ. ಇದರ ಮುಂದಿನ ಹಂತವಾಗಿ ಈ ಥಿಯರಿ ಕಲಿಕೆಗಳನ್ನೆಲ್ಲ ಉದ್ಯೋಗಪ್ರಧಾನ ಮತ್ತು ಪ್ರಾಯೋಗಿಕವಾಗಿಸಿಕೊಳ್ಳಬಹುದು.

ಹೀಗಾಗಬೇಕಾದರೆ ಮ್ಯಾನೇಜ್‌ಮೆಂಟ್, ಯೂನಿವರ್ಸಿಟಿಗಳು ವಿದ್ಯಾಭ್ಯಾಸವನ್ನು ವ್ಯಾಪಾರವೆಂದು ಭಾವಿಸಿ ಲಾಭ ಗಳಿಸುವುದನ್ನು ಮೊದಲು ಮರೆಯಬೇಕು. (ಮುಖ್ಯವಾಗಿ ಕಾಲೇಜು ವಿದ್ಯಾಭ್ಯಾಸದ ದೃಷ್ಟಿಯಿಂದ ಈ ಲೇಖನ)

ಶುಭ ಹಾರೈಕೆ

ಮಾನ್ಯರೆ,

ಮಲೆನಾಡಿನ ನಾಲ್ಕು ತಾಲ್ಲೂಕುಗಳ ಸುದ್ದಿ-ಸಮಸ್ಯೆಗಳನ್ನು ಒಳಗೊಳ್ಳುವ ಪತ್ರಿಕೆಯ ಪ್ರಕಟಣೆಯೊಂದು ಸಾಹಸದ ಕಾರ್ಯ. ಸಾಧ್ಯವಾದಷ್ಟೂ ಜನಪರ ನಿಲುವುಗಳನ್ನು ರೂಢಿಸಿಕೊಂಡು ನಮ್ಮ ಭಾಗದ ಜನತೆಯ ಅರಿವು, ವಿಚಾರಶಕ್ತಿ ಬೆಳೆಯುವಂತೆ ಮಾಡುವಲ್ಲಿ ನಿಮ್ಮ ಪತ್ರಿಕೆ ಹೆಜ್ಜೆ ಇಡಲಿ ಎಂದು ಆಶಿಸುವೆ.

ಕಷ್ಟದಾಯಕ ಉದ್ದಿಮೆಯೊಂದರಲ್ಲಿ ತೊಡಗಿಸಿಕೊಳ್ಳುತ್ತಿರುವ ನಿಮಗೂ ಮತ್ತು 'ದೀವಟಿಗೆ'ಗೂ ನನ್ನ ಶುಭಹಾರೈಕೆಗಳು.

ಶ್ರೀಕಂಠ ಕೂಡಿಗೆ,
ಸ್ನಾತಕೋತ್ತರ ಕೇಂದ್ರ,
ಬಿ. ಆರ್. ಪ್ರಾಜೆಕ್ಟ್

....ದಿಟ್ಟ ಹೆಜ್ಜೆ ಇಡುತ್ತಿದ್ದೀ. ನಿನ್ನ ಪ್ರತಿಯೊಂದು ಹೆಜ್ಜೆಯೂ ವಿಜಯದ ಹಾದಿಯತ್ತ ಸಾಗಲಿ. ನಿನ್ನ ಅಭಿವೃದ್ಧಿಗೆ ಭಗವಂತನು ಸಹಕರಿಸಲೆಂದು ಆಶಿಸುತ್ತೇನೆ

ಆತ್ಮೀಯ,
ಮೈಸೂರು. **ಶಿವು.**

'ದೀವಟಿಗೆ' ವಾರ ಪತ್ರಿಕೆಯು ನೊಂದು ಬೆಂದು ಬಳಲಿದ ಜನರ, ನೋವುಳ್ಳವರ ಎದೆಯ ನೋವಿನ ಕೂಗಾಗಲಿ. ಅಸಮಾನತೆ, ಅಸ್ಪೃಶ್ಯತೆಯ ಕಪ್ಪುಕತ್ತಲೆಯಲ್ಲಿ ಹೊಂಗಿರಣವಾಗಿ ಅರಳಲಿ. ಮಲೆನಾಡಿನ ಜನರನ್ನು ಕತ್ತಲೆಯಿಂದ ಬೆಳಕಿನತ್ತ ಸಾಗಿಸಲಿ. 'ದೀವಟಿಗೆ' ಉಳಿಯಲಿ, ಬೆಳೆಯಲಿ ಎಂದು ಹಾರೈಸುವ,

ಯಲಗುಡಿಗೆ ಮಂಜಯ್ಯ.

ಮಾನ್ಯರೆ,

ನೀ[illegible] ಹೊರಡಿಸುವ 'ದೀವಟಿಗೆ' ವಾರಪತ್ರಿಕೆ ತುಂಬಾ ಜನಪ್ರಿಯವಾಗಿ ಮೆಚ್ಚುಗೆ ಗಳಿಸಲೆಂದು ಹಾರೈಸುತ್ತೇವೆ 'ದೀವಟಿಗೆ'ಯ ಸಂಪಾದಕಬಳಗಕ್ಕೆ ನಮ್ಮ ಹಾರ್ದಿಕ ಶುಭಾಶಯಗಳು.

ಕೆ. ಸ್. ಆರ್. ನಾಯಕ್,
[illegible]ಂಗೀತ ನಿರ್ದೇಶಕ,
ಸಂಗೀತ ಮೆಲೋಡೀಸ್, ಕೊಪ್ಪ

ಪ್ರಿಯ ಶ್ರೀ [illegible]ಗರಾಜ್,

'ದೀವಟಿಗೆ' ಮಲೆನಾಡಿನ ಮೂಲೆ ಮೂಲೆಗೂ [illegible]ಳಕು ಬೀರಲಿ, ಹೊಸ ಜೀವನಕ್ಕೆ ಸ್ಫೂರ್ತಿಯನ್ನೀಯಲಿ, ಮಾರ್ಗದರ್ಶಕವಾಗಲಿ ಹಳ್ಳಿಗಾಡಿನ ಜನರ ಕೈದೀವಿಗೆಯಾಗ[illegible] 'ದೀವಟಿಗೆ'ಗೆ ಎಲ್ಲರ ಪ್ರೀತಿ, ವಿಶ್ವಾ[illegible] ಗೌರವವೂ ಲಭ್ಯವಾಗಲಿ ಎಂದು ಹಾರೈ[illegible]ತ್ತೇನೆ.

ಮೈಸೂರು. **ಕೆ. ಜಿ. ರಾಮಚಂದ್ರ,**

ಪ್ರಿಯ ನಾಗರಾಜ್,

'ಬೇಡ'ವೆಂದೂ ಕೇಳದೆ ಈ ಮುಳ್ಳಿನ ಹಾದಿಗೆ ಹೆಜ್ಜೆ [illegible]ಟ್ಟಿದ್ದೀ. ಈ ಹಾದಿಯಲ್ಲಿರುವ ಅಪಾಯದ ಅರಿವಿದ್ದೂ ನಿನ್ನ ಹುಮ್ಮಸ್ಸಿಗೆ ಶಹಭಾಷ್ ಅನ್ನುತ್ತೇನೆ.

ನಿನ್ನ [illegible]ತ್ತಲಿನ ಜನರಿಗೆ ಒಂದು ಒಳ್ಳೆಯ ಪತ್ರಿಕೆಯನ್ನು ಕೊಡುವ ನಿನ್ನ ಪ್ರಯತ್ನ ಯಶಸ್ವಿಯಾಗಲಿ. ನಿನ್ನ ಹಾದಿಯಲ್ಲಿ ಮುಳ್ಳು ಹೂವಾಗಲಿ.

ಈರಲಗೆರೆ ಸಿದ್ದಯ್ಯ,
ಪ್ರಧಾನ ಉಪಸಂಪಾದಕ,
'ಲೋಕವಾಣಿ'ದಿನಪತ್ರಿಕೆ, ಬೆಂಗಳೂರು.

ಅಸಮರ್ಪಕ ಶಿಕ್ಷಣ: ಒಂದು ಮುಖ

ಎಸ್. ಎಸ್. ವಿಶ್ವೇಶ್ವರ, ಎಂ. ಎ.

ಇಂದಿನ ನಮ್ಮ ಶಿಕ್ಷಣ ವ್ಯವಸ್ಥೆ [illegible]ಸಮರ್ಪಕ ಮತ್ತು ಅರ್ಥಹೀನ ಪದ್ಧತಿಗಳಿಂದ ಬರಿ ಶಬ್ದ ಮಾಡುತ್ತಿದೆಯೇ ಹೊರತು, ರೂಪಿಸುತ್ತಿಲ್ಲ. ಇಲ್ಲಿನ ಟೊಳ್ಳುತನವನ್ನು ಹೋಗಲಾಡಿಸಲು ಭಾರತ ಇನ್ನೂ ಎಷ್ಟು ವರ್ಷ ಕಾಯಬೇಗುವುದೋ ಏನೋ. ನಾನು ನಮ್ಮ ಶಿಕ್ಷಣವ್ಯವಸ್ಥೆಯ ಒಂದುಮುಖವನ್ನು ಇಲ್ಲಿ ನಿರೂಪಿಸುತ್ತೇನೆ.

ಈ ದೇಶ ಹಳ್ಳಿಗಳ ನಾಡು. ಈ ಹಳ್ಳಿಗಳು ಮೂಢನಂಬಿಕೆ, ಕಂದಾಚಾರ, ಜಾತಿಪದ್ಧತಿ, ತಮ್ಮ ಸಮಸ್ಯೆಗಳ ಪರಿಹಾರಕ್ಕೆ ಆಕಾಶದ ಕಡೆಗೆ ನೋಡುವುದು ಮುಂತಾದ ವಿಚಾರಹೀನತೆಯ ಕೊಳಿತ ತಿಪ್ಪೆಗಳ ತವರು. ಇನ್ನು ಇಲ್ಲಿಂದ ಬರುವ ಮಕ್ಕಳು ಮೇಲೆ ಕಾಣಿಸಿದ ಎಲ್ಲ ಸಂಸ್ಕಾರಗಳನ್ನೂ ಹೊದ್ದು ಶಾಲೆಗೆ–ಕಾಲೇಜಿಗೆ ಬರುತ್ತಾರೆ. ಇವರ ತೊಂದರೆಗಳು ಅಪಾರ ಬೆಳಗಿನಲ್ಲೇ . ಗಡಿಬಿಡಿಯಲ್ಲಿ ತಂಗಳೋ ಪಂಗಳೋ ತಿಂದು, ಮೂರೊ ನಾಲ್ಕೋ ಮೈಲು ದೂರದ ಶಾಲೆಗೆ ಏದುಸಿರು ಬಿಡುತ್ತಾ ಓಡುವುದು ಒಂದು ಗುಂಪಾದರೆ, ಇನ್ನೊಂದು ಗುಂಪು 10–15ಮೈಲಿ ದೂರದಿಂದ ಬವಣೆಪಡುತ್ತಾ ಬಸ್ಸಿನಲ್ಲಿ ಬಂದಿಳಿಯುವುದು. ಶಾಲೆಗೆ ಬಂದಕೂಡಲೇ ಪಾಠಗಳ ಭೋರ್ಗರೆತ. ಮೊದಲೇ ಅರೆಹೊಟ್ಟೆ ಜತೆಗೆ ಪ್ರಯಾಣದ ಆಯಾಸಗಳಿಂದ ಈ ಹಳ್ಳಿಯ ಮಕ್ಕಳು, ಶಾಲೆಗಳಲ್ಲಿ ಹೇಗಿರುತ್ತಾರೆ ಎಂದರೆ, ಕ್ಷೌರಿಕನ ಮುಂದೆ ಕುಳಿತು ಅವನು ಹೇಳಿದಂತೆ ಕೇಳುವ ಗೊಂಬೆಗಳಾಗಿಬಿಡುತ್ತಾರೆ. ಮತ್ತೆ ಕಾಲೇಜಿನ ಅಥವಾ ಶಾಲೆಯ ಗಂಟೆ ಹೊಡೆಯುತ್ತಿದ್ದಂತೆ, ಹಿಂದೆ ಮುಂದೆ, ಕೆಳಗೆ ಮೇಲೆನೋಡದೆ, ಬಂದ ರೀತಿಯಲ್ಲಿ ಅದೇ ವೇಗದಲ್ಲಿ, ತಮ್ಮ

(ಮೂರನೆ ಪುಟ ನೋಡಿ)

ಕೊಪ್ಪಕ್ಕೆ ಲಯನ್ಸ್ ಜಿಲ್ಲಾ ಗೌರ್ನರ್ ಭೇಟಿ

ಕೊಪ್ಪ: ಇಲ್ಲಿನ ಲಯನ್ಸ್ ಕ್ಲಬ್‌ನವರ ಆಶ್ರಯದಲ್ಲಿ ಜ.೪ರಂದು ನಡೆದ ವಿವಿಧ ಕಾರ್ಯಕ್ರಮಗಳನ್ನು ಲಯನ್ಸ್ ಜಿಲ್ಲಾ ಗೌರ್ನರ್ ಸಿ. ಎ. ಮುತ್ತಣ್ಣ ಅವರು ಉದ್ಘಾಟಿಸಿದರು.

ಬಾಳಗಡಿಯ ವಿದ್ಯಾ ಮಹಿಳಾ ಸಮಾಜದಲ್ಲಿ ಬಾಲಭವನದ ಪ್ರಾರಂಭ, ಕಸ್ತೂರ ಬಾ ಮೆಡಿಕಲ್ ಕಾಲೇಜಿನವರ ಸಹಯೋಗದೊಂದಿಗೆ ರಕ್ತದಾನ ಶಿಬಿರ, ತಹಸೀಲ್ದಾರ ಮತ್ತು ಸಿಬ್ಬಂದಿಯ ಸಹಕಾರದೊಂದಿಗೆ ಕಸಬಾ ಮತ್ತು ಹರಿಹರಪುರ ಹೋಬಳಿಗಳ ಅಂಗವಿಕಲರಿಗೆ ಪೋಷಣ ಭತ್ಯ ಮಂಜೂರಾತಿ–ಇವು ಆ ದಿನ ನಡೆದ ಕಾರ್ಯಕ್ರಮಗಳು; ಇಬ್ಬರು ಮಹಿಳೆಯರೂ ಸೇರಿದಂತೆ ೭೩ ಜನ ರಕ್ತದಾನ ಮಾಡಿದರು. ೮೯ ಜನ ಅಂಗವಿಕಲರಿಗೆ ಪೋಷಣಭತ್ಯ ಹಂಚಲಾಯಿತು

ಅಂಚೆ ನೌಕರರ ಸಮ್ಮೇಳನ

ಕೊಪ್ಪ: ಅಖಿಲ ಭಾರತ ಅಂಚೆ ನೌಕರರ ಸಂಘದ ಕೊಪ್ಪ ಶಾಖೆಯ ೨ನೇ ಜಂಟಿ ವಾರ್ಷಿಕ ಸಮ್ಮೇಳನ ಜ. ೩ ರಂದು ಇಲ್ಲಿ ನಡೆಯಿತು. ಕೊಪ್ಪ, ಶೃಂಗೇರಿ, ನ.ರಾ. ಪುರ ತಾಲ್ಲೂಕುಗಳ ಮುನ್ನೂರಕ್ಕೂ ಹೆಚ್ಚು ನೌಕರರು ಭಾಗವಹಿಸಿದ್ದರು.

ಎಲ್. ಐ. ಸಿ. ಯ ತೋಡಿನ್ನಾಯರು (ಕಾರ್ಕಳ) ಸಮ್ಮೇಳನ ಉದ್ಘಾಟಿಸಿದರು. ರಮೇಶ್, ಜಯರಾಮ್, ಶೇಖರ, ಸನಾವುಲ್ಲ, ವಿನೋದಬಾಬು ಮುಂತಾದವರು ಸಭೆಯಲ್ಲಿ ಮಾತನಾಡಿದರು. ಸಮ್ಮೇಳನದ ಅಧ್ಯಕ್ಷತೆಯನ್ನು ಬಿ. ಪಿ. ಭಟ್ ಮತ್ತು ಐ. ಎಸ್. ಎಂ. ಜೋಯಿಸ್ ಜಂಟಿಯಾಗಿ ವಹಿಸಿದ್ದರು. ಎಂ. ಎಸ್. ಶೆಟ್ಟಿ ಸ್ವಾಗತಿಸಿದರು. ಬಿ.ಪಿ. ಗಣಪತಿ ಸಂದೇಶ ಓದಿದರು. ಜೆ. ಎಂ. ಭಟ್ ವಂದಿಸಿದರು.

ರಾಜ್ಯ ಸರ್ಕಾರಿ ನೌಕರರ ಸಾಂಕೇತಿಕ ಮುಷ್ಕರ

ಕೊಪ್ಪ : ರಾಜ್ಯ ಸರ್ಕಾರಿ ನೌಕರರ ಕೇಂದ್ರ ಸಂಘದ ಕರೆಯಂತೆ ಇಲ್ಲಿನ ಸರ್ಕಾರಿ ನೌಕರರು ದಿ. 7 ರಂದು ತಮ್ಮ ಕೆಲಸಗಳಿಗೆ ಹಾಜರಾಗದೆ ಒಂದು ದಿನದ ಸಾಂಕೇತಿಕ ಮುಷ್ಕರ ನಡೆಸಿದರು.

ತಾಲ್ಲೂಕಿನ ಎಲ್ಲಾ ಕಡೆಗಳಿಂದ ಬಂದಿದ್ದ ಸುಮಾರು ಐನೂರಕ್ಕೂ ಮಿಕ್ಕ ನೌಕರರು ಪುರಭವನದಲ್ಲಿ ಬಹಿರಂಗ ಸಭೆ ನಡೆಸಿ, ನಂತರ ಟೌನಿನ ಮುಖ್ಯ ರಸ್ತೆಗಳಲ್ಲಿ ಘೋಷಣೆಗಳೊಂದಿಗೆ ಶಾಂತಿಯುತ ಪ್ರದರ್ಶನ ನಡೆಸಿದರು. ಸಾಕಷ್ಟು ಸಂಖ್ಯೆಯಲ್ಲಿ ಮಹಿಳೆಯರು ಪಾಲ್ಗೊಂಡಿದ್ದರು

ಶೃಂಗೇರಿ ಹಾಗೂ ನರಸಿಂಹರಾಜಪುರಗಳಲ್ಲೂ ಮುಷ್ಕರ ನಡೆದಿರುವುದಾಗಿ ವರದಿ ಬಂದಿದೆ. ೬ನೇ ಪುಟಕ್ಕೆ

ಲೆವಿ ನೀತಿ .... (೨ನೆಪುಟದಿಂದ)

. ಪರವಾನಗಿಯನ್ನು ಬೆಳೆಗಾರರು/ಕೃಷಿಕಾರ್ಮಿಕರ ಮನೆಗಳಿಗೇ ತಲುಪಿಸುವ ಉದ್ದೇಶವಿದೆ. ಬರುವ ತಿಂಗಳಿಂದಲಾದರೂ ಈ ಕ್ರಮ ಕಾರ್ಯ ರೂಪಕ್ಕೆ ಬರುತ್ತದೆಂದು ಕೊಪ್ಪ ತಹಸೀಲ್ದಾರರು ಭರವಸೆ ವ್ಯಕ್ತಪಡಿಸಿದ್ದಾರೆ.

ದಕ್ಷಿಣದ ಉಳಿದೆಲ್ಲ ರಾಜ್ಯಗಳಲ್ಲಿ ಈ ರೀತಿಯ ಲೆವಿ ಸಂಗ್ರಹಣೆ ಪದ್ಧತಿ ಜಾರಿಯುಲ್ಲಿದ್ದು,ಎಲ್ಲಾ ಕಡೆ ಒಂದೇರೀತಿಯ ಕ್ರಮ ಅನುಸರಿಸುವ ಸಲುವಾಗಿ ಈ ಮಾರ್ಪಾಡು ಮಾಡಿರುವುದಾಗಿ ತಿಳಿದು ಬಂದಿದೆ. ಈ ಪದ್ಧತಿಯಲ್ಲಿ ವ್ಯಾಪಾರಗಾರರಿಂದ ಲೆವಿ ಸಂಗ್ರಹಿಸುವುದರಿಂದ ಬೆಳೆಗಾರರಿಗೆ ಯಾವುದೇ ಹಾನಿ ಇಲ್ಲವೆಂದೂ ಸರ್ಕಾರ ಹೇಳಿಕೊಂಡಿದೆ.

(ಈ ಹೊಸ ಕ್ರಮದ ಅನುಷ್ಠಾನದಲ್ಲಿ ತಮಗಾದ ತೊಂದರೆ/ತೊಡಕುಗಳ ಬಗ್ಗೆ ಓದುಗರು 'ದೀವಟಿಗೆ'ಗೆ ಬರೆಯಬೇಕಾಗಿ ಕೋರಿಕೆ. –ಸಂ.)

ವಿಚಾರ ಸಂಕಿರಣ

ತೀರ್ಥಹಳ್ಳಿ: ಇಲ್ಲಿನ ವಿಚಾರವಾದೀ ವೇದಿಕೆಯ ಆಶ್ರಯದಲ್ಲಿ ದಿ. ೩೧–೧೨–೮೧ ರಂದು ಹಾರೋಗೊಳಿಗೆಯಲ್ಲಿ ವಿಚಾರ ಸಂಕಿರಣವೊಂದು ನಡೆಯಿತು. "ನಜೀಮಾ ಭಾಂಗಿ ಪ್ರಕರಣ ಹಾಗೂ ಧರ್ಮ ಮತ್ತು ಸ್ತ್ರೀಸ್ವಾತಂತ್ರ್ಯ"; "ಆದಿಚುಂಚನಗಿರಿಮಠ ಮತ್ತು ತೇಜಸ್ವಿಯವರ ಪತ್ರ" ಎಂಬ ವಿಷಯಗಳ ಬಗ್ಗೆ ಮೈಸೂರು ಮಹಾರಾಜ ಕಾಲೇಜಿನ ಕೆ. ರಾಮದಾಸ್, ವಿದ್ಯಾವರ್ಧಕ ವಾಣಿಜ್ಯ ಕಾಲೇಜಿನ ಶಿವರಾಮು ಕಾಡನಕುಪ್ಪೆ ಮತ್ತು ತೀರ್ಥಹಳ್ಳಿ ಪ್ರಥಮ ದರ್ಜೆ ಕಾಲೇಜಿನ ಕೃಷ್ಣೇಗೌಡ ಮಾತನಾಡಿದರು. (ಈ ಭಾಷಣಗಳ ಸಾರಾಂಶವನ್ನು 'ದೀವಟಿಗೆ' ಮುಂದೆ ಪ್ರಕಟಿಸುವುದು. –ಸಂ.)

ಕೊಪ್ಪದಲ್ಲಿ

ಹುಜೂರ್ ಜಮಾಬಂದಿ

ಕೊಪ್ಪ: ಚಿಕ್ಕಮಗಳೂರು ಉಪ ವಿಭಾಗಾಧಿಕಾರಿಗಳು ಜ.೧೧ರಂದು ಇಲ್ಲಿನ ತಾಲ್ಲೂಕು ಕಚೇರಿಯಲ್ಲಿ ಹುಜೂರ್ ಜಮಾಬಂದಿ ನಡೆಸುವರು. ಅಂದು ಅವರು ಜಯಪುರ ಮತ್ತು ಹರಿಹರಪುರ ಪಂಚಾಯ್ತಿ ಕಚೇರಿಗಳಲ್ಲಿ ಸಾರ್ವಜನಿಕರನ್ನು ಸಂದರ್ಶಿಸುತ್ತಾರೆ. ರೈತರು ಅವರನ್ನು ಭೇಟಿ ಮಾಡಿ ತಮ್ಮ ಕುಂದು ಕೊರತೆಗಳನ್ನು ನಿವೇದಿಸಿಕೊಳ್ಳಬಹುದು.

ನೌಕರರ ಮುಷ್ಕರ (೪ನೇ ಪುಟದಿಂದ)

ವೇತನಪರಿಷ್ಕರಣ, ಕನಿಷ್ಠ ಹತ್ತು ವರ್ಷಕ್ಕೆ ಒಂದು ಬಡ್ತಿ, ನಿವೃತ್ತಿ ವಯೋಮಿತಿ ಏರಿಕೆ ಮುಂತಾದ ನೌಕರರ ಬೇಡಿಕೆಗಳ ಬಗ್ಗೆ ಸರ್ಕಾರ ಮುಂದಿಟ್ಟಿರುವ ಸಲಹೆಗಳನ್ನು ಪರಿಶೀಲಿಸಿ, ಸಂಧಾನ ಮುಂದುವರಿಸಲು ಅನುಕೂಲವಾಗುವಂತೆ ನೌಕರರು ತಮ್ಮ ಅನಿರ್ದಿಷ್ಟ ಮುಷ್ಕರವನ್ನು ಫೆ. ೬ರ ವರೆಗೆ ಮುಂದೂಡಿದ್ದಾರೆ.

ಸಂಪಾದಕ, ಪ್ರಕಾಶಕ ಮತ್ತು ಮುದ್ರಕ: ಸಿ.ವಿ.ನಾನೆ ನಾಗರಾಜ್. ಮುದ್ರಣ: ನೇಸರ ಮುದ್ರಣ, ಕೊಪ್ಪ.